**<u>ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ</u>**

**<u>ಸಿ.ಸಿ. ನಂ.519/2021</u>**

**ಚಾ.ಸಾ. - 5**
**ಪ್ರಾ.ಸಾ. - 4**

**ಸಾಕ್ಷಿದಾರರ ಹೆಸರು** ಃ ಶಾಂತವ್ವ ಬಸಪ್ಪ ತೋಟಗಿ

**ಸಾಕ್ಷಿದಾರರ ವಯಸ್ಸು** ಃ 60 ವರ್ಷ

**ಸಾಕ್ಷಿದಾರರ ಉದ್ಯೋಗ** ಃ ಮನೆಗೆಲಸ

**ಸಾಕ್ಷಿದಾರರ ವಿಳಾಸ** ಃ ನಾಗನೂರು

---

**<u>ಪ್ರಮಾಣ ವಚನ ಮಾಡಿದ ದಿನಾಂಕ ಃ09-10-2023</u>**

**<u>ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ</u>**

ಚಾಸಾ-4 ನನ್ನ ಗಂಡ. ಸದರಿಯವರು ಈಗ ಮೃತ ಪಟ್ಟಿರುತ್ತಾರೆ. ಚಾಸಾ-1 , 6, ಮತ್ತು 7 ನನ್ನ ಮಕ್ಕಳು. ಆರೋಪಿತರು ನನ್ನ ಸಂಬಂದಿಕರು. ನಮ್ಮ ಮತ್ತು ನನ್ನ ಮಗ ಸಿದ್ರಾಮ ನಡುವೆ ಆಸ್ತಿ ಕುರಿತು ಮನಸ್ತಾಪ ಇತ್ತು ಆ ಕಾರಣಕ್ಕಾಗಿ ನಾವು ತಹಶೀಲ್ದಾರ ಕಚೇರಿಯಲ್ಲಿ ತಕರಾರು ಅರ್ಜಿ ಸಲ್ಲಿಸಿರುತ್ತೇವೆ. ದಿಃ11.1.2021 ರಂದು ನಾವು ಮನೆಯ ಮುಂದೆ ಇದ್ದಾಗ 2 ನೇ ಆರೋಪಿಯು ಅಲ್ಲಿಗೆ ಬಂದು ತಕರಾರು ಅರ್ಜಿಯನ್ನು ಹಿಂತೆಗೆದುಕೊಳ್ಳುವಂತೆ ಹೇಳಿರುತ್ತಾರೆ. ಅದೇ ವೇಳೆಗೆ 3 ಮತ್ತು 1 ನೇ ಆರೋಪಿಯು ಅಲ್ಲಿಗೆ ಬಂದು ಜಗಳ ತೆಗೆದಿರುತ್ತಾರೆ. 3 ನೇ ಆರೋಪಿಯು ಬೊಸುಡಿರಾ ನಮಗೇನು ಹೇಳುತ್ತೀರಾ ಎಂದು ಚಾಸಾ-6 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ಜಗಳ ತೆಗೆದಿರುತ್ತಾರೆ. ಅದೇ ವೇಳೆಗೆ ಚಾಸಾ-4 ರವರು ಜಗಳ ಬಿಡಿಸಲು ಬಂದಾಗ 1 ನೇ ಆರೋಪಿಯು ಕೊಡಲಿ ಕಾವಿನಿಂದ ಅವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ. ಅದರಿಂದ ಚಾಸಾ-4 ರವರಿಗೆ ತಲೆಗೆ ರಕ್ತ ಗಾಯವಾಗಿ ಪ್ರಜ್ಞಾಹೀನರಾಗಿ ಬಿದ್ದಿರುತ್ತಾರೆ. ನಂತರ ನನಗೆ 1 ನೇ ಆರೋಪಿಯು ನನ್ನ ಬಲಗೈಗೆ ಹೊಡೆದು ಗಾಯಪಡಿಸಿರುತ್ತಾನೆ. ಜಗಳವನ್ನು ನೋಡಿ ಚಾಸಾ-8 ಮತ್ತು 9 ರವರು ಬಿಡಿಸಿರುತ್ತಾರೆ. ನಂತರ ನಾವು ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ಚಾಸಾ-1 ರವರು ದೂರನ್ನು ನೀಡಿದ್ದು ಪೊಲೀಸರು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸಾಕ್ಷಿಯು ಮೂ ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಎಪಿಪಿ ಅವರಿಂದ**

ಚಾಸಾ-1, 6 ಮತ್ತು 7 ರವರು ಸೀರೆ ಕಾರ್ಯಕ್ರಮ ಇದ್ದ ಕಾರಣ ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿ. 1 ನೇ ಆರೋಪಿಯು ನನಗೆ ಬಡಿಗೆಯಿಂದ ತಲೆಗೆ ಮತ್ತು ಬೆನ್ನಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಅದೇ ರೀತಿ ಚಾಸಾ-7 ರವರಿಗೂ ಸಹಾ ಬಡಿಗೆಯಿಂದ ಬೆನ್ನಿಗೆ ಮತ್ತು ಎಡಗೈಗೆ 1 ನೇ ಆರೋಪಿಯು ಬಡಿದಿರುತ್ತಾನೆ ಎಂದರೆ ಸರಿ. ಆರೋಪಿತರು ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಅಲ್ಲೇ ಮೂ ಮಾ 1 ಮತ್ತು 2 ನ್ನು ಎಸೆದು ಹೋಗಿರುತ್ತಾರೆ ಎಂದರೆ ಸರಿ. ಘಟನೆಯು ರಾತ್ರಿ 8.30 ರ ಸುಮಾರಿಗೆ ಆಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಆರ ಎಮ ಎಮ ವಕೀಲರಿಂದ**

ಪೊಲೀಸರು ಸದರಿ ಹೊಡೆದಾಟದ ಬಗ್ಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಘಟನೆಯು ದಿ:11.1.2021 ರ ರಾತ್ರಿ 8.30 ಗಂಟೆಗೆ ಆಗಿರುತ್ತದೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಆರೋಪಿ ಮನೆತನಕ್ಕೂ ಮತ್ತು ನಮ್ಮ ಮನೆತನಕ್ಕೂ ಸಂಬಂದ ಸರಿ ಇರುವುದಿಲ್ಲ ಎಂದರೆ ಸರಿ. ನನಗೆ ಸಿಧ್ರಾಮ ಒಬ್ಬನೇ ಗಂಡು ಮಗ ಎಂದರೆ ಸರಿ. ಸದರಿ ಸಿಧ್ರಾಮ ಈತನ ಮೇಲೆ ಚಾಸಾ-4 ರವರಿಗೆ ವಿಶೇಷ ಪ್ರೀತಿ ಇತ್ತು ಎಂದರೆ ಸರಿ. ದಿ:26.11.2020 ರಂದು ಚಾಸಾ-4 ಮತ್ತು ಸದರಿ ನನ್ನ ಮಗ ಸಿಧ್ರಾಮ ಇವರ ನಡುವೆ ನೊಂದು ನೊಂದಾಯಿತ ವಿಭಾಗ ಆಗಿ ಆಸ್ತಿಯನ್ನು ಸಿಧ್ರಾಮ ಈತನಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ನೊಂದಾಯಿತ ವಿಭಾಗ ಪತ್ರಕ್ಕೆ ಸಂಗಪ್ಪ ತಲ್ಲೂರ ಮತ್ತು 2 ನೇ ಆರೋಪಿಯು ಸಾಕ್ಷಿದಾರರು ಇರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಆಗಿರುವ ಬಗ್ಗೆ ನನಗೆ ಮತ್ತು ನನ್ನ ಹೆಣ್ಣು ಮಕ್ಕಳಿಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಮೂ ಮಾ 2 ರಿಂದ ನನ್ನ ಕೈಗೆ ಬಡಿದಿರುತ್ತಾನೆ. 1 ನೇ ಆರೋಪಿಯು ಚಾಸಾ-4 ರವರಿಗೆ ಬಡಿದಾಗ ಅವನಿಗೆ ರಕ್ತ ಬಂದು ಪ್ರಜ್ಞಾ ಹೀನನಾಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನಗೆ ಬಡಿದಾಗ ರಕ್ತ ಬಂದಿರುವುದಿಲ್ಲ. ಜಗಳ ಆದಾಗ ಸಾರ್ವಜನಿಕರು 5-6 ಜನ ಸೇರಿದ್ದರು. ಸದರಿ 5-6 ಜನರ ಹೆಸರು ನನಗೆ ಈಗ ಹೇಳಲು ಬರುವುದಿಲ್ಲ. ಚಾಸಾ-4 ರವರಿಗೆ ಅವರ ಬಟ್ಟೆಯ ಮೇಲೆ ರಕ್ತ ಬಿದ್ದಿರುತ್ತದೆ. ಸದರಿ ರಕ್ತ ಹತ್ತಿದ ಬಟ್ಟೆಗಳನ್ನು ಪೊಲೀಸರಿಗೆ ತೋರಿಸಿರುತ್ತೇವೆ.



ದಿ:11.1.2021 ರಂದು 2 ನೇ ಆರೋಪಿಯು ಬಂದು ತಕರಾರನ್ನು ವಾಪಸ್ಸು ತೆಗೆದುಕೋ ಎಂದು ನಮ್ಮ ಮೇಲೆ ಜಗಳ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ಅವ್ಯಾಚ್ಯ ಶಬ್ದಗಳಿಂದ ಬೈಯ್ದಿರುತ್ತಾಳೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಮು ಮಾ 1 ಮತ್ತು 2

ರಿಂದ ನನಗೆ , ಚಾಸಾ-1 , 4 ರಿಂದ 6 ರವರಿಗೆ ಹಲ್ಲೆ ಮಾಡಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 2 ನೇ ಆರೋಪಿಯು ವಿಭಾಗ ಪತ್ರಕ್ಕೆ ಸಾಕ್ಷಿ ಎಂದು ಸಹಿ ಮಾಡಿದ್ದರಿಂದ ಅದರ ಸಿಟ್ಟಿನ ಮೇಲೆ ಆತನು ಬಡಿದಿರುತ್ತಾನೆ ಎಂದು ಆತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅದೇ ದಿನ ರಾತ್ರಿ 9.00 ಗಂಟೆಗೆ ನಾಗನೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿಂದ ಬೈಲಹೊಂಗಲದ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ. ಬೈಲಹೊಂಗಲದ ಸರ್ಕಾರಿ ಆಸ್ಪತ್ರೆಗೆ ಬಂದು ದಾಖಲಾದಾಗ ರಾತ್ರಿ 9.30 ಗಂಟೆಯಾಗಿರುತ್ತದೆ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ